# ನರಿಯ ಜಾಣತನ



ಒಂದು ವಿಶಾಲವಾದ ಅರಣ್ಯ. ಅದರಲ್ಲಿ ಒಂದು ಸಣ್ಣ ನೀರಿನ ತೊರೆ ವರ್ಷಪೂರ್ತಿ ಹರಿಯುತ್ತಿತ್ತು. ಆ ನೀರೆ ಅಲ್ಲಿನ ಎಲ್ಲ ಪ್ರಾಣಿ–ಪಕ್ಷಿಸಂಕುಲಗಳಿಗೆ ಕುಡಿಯುವ ನೀರಿನ ಆಸರೆಯಾಗಿತ್ತು.

ಒಂದು ದಿನ ಆ ಅರಣ್ಯದ ಮೃಗರಾಜ ಸಿಂಹ ಮಧ್ಯಾಹ್ನ ಬೇಸಿಗೆಯಲ್ಲಿ ಬಿಸಿಲಿನ ತಾಪದಿಂದ ಬಾಯಾರಿಕೆ ತಣಿಸಿಕೊಳ್ಳಲು ತೊರೆಗೆ ಬಂತು. ನೀರು ಕುಡಿಯುವಾಗ ಯಾವದೋ ಪ್ರಾಣಿ ತೊರೆಯ ಮೇಲ್ಭಾಗದಲ್ಲಿ ನೀರು ಕುಡಿಯುತ್ತಿರುವ ಶಬ್ದ ಕೇಳಿತು.

ಮೃಗರಾಜನಿಗೆ ಸೆಕೆ ತಡಿಯಲಾರದೆ ಆಗುತ್ತಿದ್ದ ಹಿಂಸೆಯೊಂದಿಗೆ ತನಗಿಂತ ಮೊದಲು ನೀರು ಕುಡಿಯುವ ಪ್ರಾಣಿ ಬಗ್ಗೆ ಅಸಹನೀಯ ಸಿಟ್ಟು ಬಂದಿತು. ಆ ಬಡ ಪ್ರಾಣಿ ಎಂಜಲು ಮಾಡಿದ ನೀರು ಕುಡಿಯುವಂತೆ ಆಗಿದ್ದನ್ನು ತಡೆದುಕೊಳ್ಳಲಾಗಲಿಲ್ಲ. ಅಲ್ಲಿಂದಲೇ ಹುಂಕರಿಸಿ ಗರ್ಜಿಸಿತು.

ಆ ಗರ್ಜನೆಯನ್ನು ಕೇಳಿಯೇ ಸುತ್ತಮುತ್ತಲಿನ ಪಕ್ಷಿ ಮತ್ತು ಪ್ರಾಣಿಗಳು ಹೆದರಿದವು. ಕೆಲವು ಏನೋ ಆಪತ್ತು ಬಂದಿರಬೇಕೆಂದು ಚಿಂತೆಯಲ್ಲಿ ಮುಳಗಿದವು. ರಾಜಸಿಂಹ ಒಮ್ಮೆಲೇ 'ಮೂರ್ಖ ಯಾರದು? ನಾನು ಕುಡಿಯುವ ನೀರನ್ನು ಎಂಜಲುಮಾಡಿ, ಎಂಜಲು ಕುಡಿಯುವಂತೆ ಮಾಡುತ್ತಿರುವುದು?' ಎಂದು ನಿಂತಲಿಂದಲೇ ಹಾರಿ ತೊರೆಯ ಹರುವಿನ ಮೇಲ್ಭಾಗಕ್ಕೆ ಬಂದು ನಿಂತಿತು.

ಅಲ್ಲಿ ತನ್ನದೇ ದೇಶದ ಆರೋಗ್ಯ ಮಂತ್ರಿಯಾದ ನರಿ ಕಾಣಿಸಿತು. ಸಿಂಹದ ಗರ್ಜನೆ ಕೇಳಿಯೇ ನರಿಗೆ ಆಘಾತವಾಗಿತ್ತು. ತಾನು ತಿಳಿಯದೇ ತಪ್ಪು ಮಾಡಿರುವೆ ಎನಿಸಿತ್ತು. ಸಿಂಹ ಅಸಹನೆಯ ಜ್ವಾಲೆಯಿಂದ ಉರಿಯುತ್ತಿರುವುದನ್ನು ಅರಿತ ನರಿ ಸಂಕಷ್ಟದಿಂದ ಪಾರಾಗುವ ಬಗ್ಗೆ ಚಿಂತಿಸಿತು.

ಅದನ್ನು ತೋರಿಸಿಕೊಳ್ಳದೆ, ನರಿ ಮೆಲ್ಲನೇ ನೀರು ಕುಡಿದು ಮೇಲೇರಿ ನಿಂತು ಮೂತಿಯನ್ನು ತನ್ನ ನಾಲಿಗೆಯಿಂದ ಸವರಿ ಕೊಳ್ಳುತ್ತಾ ಪುಣ್ಯ! ನೀರು ಶುದ್ಧವಾಗಿದೆ. ತನ್ನ ವನರಾಜನ ಪ್ರಾಣಕ್ಕೇನು ಹಾನಿಯಿಲ್ಲ ಎಂದು ತನ್ನಷ್ಟಕ್ಕೆ ತಾನೇ ಹೇಳಿಕೊಳ್ಳುತ್ತಾ ಮೇಲಕ್ಕೆ ಬಂದಿತು.

ಎದುರಿಗಿದ್ದ ಸಿಂಹವನ್ನು ನೋಡಿ, 'ಮೃಗರಾಜಾರಿಗೆ ನಮಸ್ಕಾರ. ತಮ್ಮ ಆರೋಗ್ಯವನ್ನು ಕಾಪಾಡುವುದು ಪ್ರಜೆಗಳ ಜವಾಬ್ದಾರಿ. ತಮ್ಮ ಜೀವಕ್ಕೆ ಯಾವದೇ ಕುತ್ತೂ ಉಂಟಾಗದಂತೆ ಕಾಯುವ ಸೇವೆ ಪ್ರಜೆಗಳಲ್ಲಿ ಒಬ್ಬನಾದ ತನ್ನದು ಸಹ. ಅದಕ್ಕಾಗಿ ತಾನು ತಮಗಿಂತ ಮೊದಲು ನೀರು ಕುಡಿದು, ಅದು ತಮ್ಮ ದೇಹ ಪ್ರಕೃತಿಗೆ ಹಿತಕಾರಿಯಾಗಿದೆಯೇ ಎಂದು ಮನವರಿಕೆ ಮಾಡಿಕೊಂಡೆ ಎಂದಿತು.

ಅಲ್ಪಮಾನವರು ಅವರ ಬಗ್ಗೆಯೇ ಕಾಳಜಿ ಮಾಡಿಕೊಳ್ಳದೆ ವಿಷಕಾರಿ ವಸ್ತುಗಳನ್ನು ನೀರಿಗೆ ಬಿಡುತ್ತಾರೆ. ಅದರಿಂದಾಗಿ ಆ ನೀರುಕುಡಿದ ನಿರೂಪದ್ರವಿ ಪ್ರಾಣಿಪಕ್ಷಿಗಳೂ ನಾಶವಾಗುತ್ತಿರುವದನ್ನು ತಾನು ಇತ್ತೀಚೆಗೆ ನಗರ ಸಂಚಾರ ಮಾಡಿದಾಗ ಕಂಡಿರುವೆ. ಅದಕ್ಕಾಗಿಯೇ ತನ್ನ ಪ್ರಾಣ ಒತ್ತೆಯಿಟ್ಟಾದರೂ ಸರಿಯೇ ಅರಣ್ಯ ಬಾಂಧವರ ಜೀವಕ್ಕೆ ತೊಂದರೆ ಆಗಬಾರದೆಂದು ಈ ಕಾರ್ಯ ಇಷ್ಟವಿಲ್ಲದಿದ್ದರೂ ಮಾಡಬೇಕಾಯಿತು. ಖಾವಂದರರು, ನಿಜವ ಅರಿತು ತಾಳ್ಮೆಯಿಂದ ಯೋಚಿಸಿ. ಶಿಕ್ಷೆ ವಿಧಿಸಲೇಬೇಕೆಂದು ನಿರ್ಣಯಿಸಿದರೆ, ಆ ಶಿಕ್ಷೆ ತಮ್ಮ ಜೀವ ಉಳಿಸುವುದಕ್ಕಿಂತ ದೊಡ್ಡದೇ? ಅದನ್ನು ನಾನು ಶಿರಸಾವಹಿಸಿ ಪಾಲಿಸುವೆ.

ತನ್ನ ಸಾವು ತಮ್ಮಿಂದಲೇ ಆಗಲಿ. ತಾನು ಸತ್ತರೂ ಚಿಂತೆಯಿಲ್ಲ. ಮಾನವರು ನೀರಿಗೆ ಸೇರಿಸುವ ವಿಷಗಳಿಂದ ತಮ್ಮನ್ನು ಯಾರು ರಕ್ಷಿಸುತ್ತಾರೆ? ಎಂಬುದೇ ತನ್ನ ಮುಂದಿನ ಚಿಂತೆ ಎನ್ನುತ್ತಾ ನರಿ ಮೃಗರಾಜರನ್ನು ಓರೆ ಕಣ್ಣಲ್ಲಿ ನೋಡುತ್ತಾ ಕಣ್ಣೀರನ್ನೇ ಹರಿಸಿತು.

ಠಕ್ಕ ನರಿಯ ಮಾತುಕೇಳಿ ಮೃಗರಾಜನಿಗೆ ನಿಜವೆಂದು ಅನಿಸಿ ಸಮಾಧಾನವಾಯಿತು. ರಾಜ ಸಂತೃಪ್ತಿಯಿಂದ ನರಿಗೆ ತಾನು ಬೇಟೆಯಾಡಿದ ಪ್ರಾಣಿಯನ್ನೂ, ಕುಡಿಯುವ ನೀರನ್ನು ಮೊದಲು ನೀನೇ ರುಚಿ ನೋಡಬೇಕು. ಅದು ಸೂಕ್ತವೆಂದ ಅನಂತರವೇ ತಾನು ಸೇವಿಸುವುದಾಗಿ ನಿರ್ದೇಶನ ನೀಡಿತು. ನರಿಯ ಕಾಳಜಿಗೆ ಧನ್ಯವಾದ ಹೇಳಿ ಕೊರಳಲಿದ್ದ ಮುತ್ತಿನ ಹಾರವನ್ನು ಇನಾಮ್ ಆಗಿ ನೀಡಿತು.

**■ ರಾಮಕೃಷ್ಣ ಗೋಖಲೆ, ತಿಳವಳ್ಳಿ**